ಸಾಕ್ಷಿಯನ್ನು ದಿನಾಂಕ 05.08.2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಭೋಧಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :**

5. ನಮ್ಮ ಮನೆ ಆಕಳಕುಂಪಿ ಗ್ರಾಮದಲ್ಲಿ ಇದೆ ಅಂದರೆ ಸರಿ. ಅದೇ ಊರಿನಲ್ಲಿ ಊರಿನಿಂದ ದೂರಿನಲ್ಲಿ ನಮ್ಮ ಜಮೀನು ಇದೆ ಅಂದರೆ ಸರಿ. ನಮ್ಮ ಜಮೀನಿನ ಪಕ್ಕದಲ್ಲಿ ಆರೋಪಿ ಜಮೀನು ಇದೆ ಅಂದರೆ ಸರಿ. ನಮ್ಮ ಜಮೀನು ಮತ್ತು ಆರೋಪಿಯ ಜಮೀನಿನ ಮಧ್ಯದಲ್ಲಿರುವ ಬದುವಿಗೆ ಸಂಬಂಧಿಸಿ ತಕರಾರುಗಳು ಇದ್ದವು ಅಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಶಿವಮ್ಮ ಇವಳನ್ನು ಅದೇ ವಿಷಯಕ್ಕೆ ಸಂಬಂಧಿಸಿ ಬಡೆದಿದ್ದನು ಅಂದರೆ ಸರಿ. ನನ್ನ ತಂದೆ ಆರೋಪಿಯ ದೊಡ್ಡಪ್ಪನಾದ ಬಸ್ಸಯ್ಯ ಈತನನ್ನು 2-3 ಬಾರಿ ಬಡೆದಿದ್ದನು ಅಂದರೆ ಸರಿ.

6. ನನ್ನ ತಂದೆಯ ತಂದೆಯಾದ ರಾಮಣ್ಣ ಈತನು ಆರೋಪಿಯ ತಾಯಿ ಸಿದ್ದಮ್ಮ ಇವಳನ್ನು ಮೊದಲು ಬಡೆದಿದ್ದನು ಅಂದರೆ ಸರಿ. ನನ್ನ ತಾತನಿಗೆ 5 ಜನ ಗಂಡು ಮಕ್ಕಳು ಇದ್ದಾರೆ ಅಂದರೆ ಸರಿ. ನನ್ನ ತಂದೆ ಮತ್ತು ದೇವೆಂದ್ರ ಇವರು ಪ್ರತ್ಯೇಕ ಮನೆಗಳಲ್ಲಿ ವಾಸವಿದ್ದಾರೆ ಅಂದರೆ ಸರಿ. ದೇವೆಂದ್ರ ಈತನ ಮನೆ ಊರಲ್ಲಿ ಇದೆ ಅಂದರೆ ಸರಿ. ನನ್ನ ತಾತ ಈತನು ಆತನ ಮಕ್ಕಳಾದ ಹನುಮಂತರಾಯ, ಕರಿಯಪ್ಪ, ದುರಗಣ್ಣ ಇವರೊಂದಿಗೆ ಊರಲ್ಲಿಯ ಮನೆಯಲ್ಲಿ ವಾಸವಿದ್ದಾನೆ ಅಂದರೆ ಸರಿ.

7. ಸಿದ್ದಮ್ಮ ಇವಳ ಮೇಲೆ ಹಲ್ಲೆ ಮಾಡಿದ ಕೇಸು ನ್ಯಾಯಾಲಯದಲ್ಲಿ 4 ಜನರ ವಿರುದ್ಧ ಚಾಲ್ತಿಯಲ್ಲಿ ಇದೆ ಅಂದರೆ ಸರಿ. ಆರೋಪಿಯ ಜಮೀನಿನು ಬೀಳು ಬಿದ್ದಿದೆ ಅಂದರೆ ಸರಿ. ನನ್ನ ತಂದೆ ಆರೋಪಿ ಮತ್ತು ಆತನ ಕುಟುಂಬದವರಿಗೆ ಜಮೀನಿನ್ನು ಸಾಗುವಳಿ ಮಾಡಲು ಬಿಡುತ್ತಿಲ್ಲ ಅಂದರೆ ಸರಿ.

8. ಆರೋಪಿ ಬೆಂಗಳೂರಿನಲ್ಲಿ ಜನಿಸಿ ಅಲ್ಲಿ ಮತ್ತು ನಂತರ ಉಡುಪಿಯಲ್ಲಿ ವಾಸವಿದ್ದನು ಅಂದರೆ ಸರಿ. 2016 ರಲ್ಲಿ ಆರೋಪಿಯ ತಂದೆ ಮತ್ತು ತಾಯಿ ನಮ್ಮ ಊರಿಗೆ ಮರಳಿ ಬಂದಿದ್ದರು ಅಂದರೆ ಸರಿ. ಅಲ್ಲಿಯವರೆಗೆ ನನ್ನ ತಂದೆ ಜಮೀನನ್ನು ಸಾಗುವಳಿ ಮಾಡುತ್ತಿದ್ದನು ಅಂದೆರ ಸರಿ. ಈ ಕಾರಣಕ್ಕಾಗಿ ನನ್ನ ತಾತ, ನನ್ನ ತಂದೆ, ಆತನ ಸಹೋದರರರು ಮತ್ತು ಆರೋಪಿಯ ತಂದೆಯೊಂದಿಗೆ ಸರಿಯಾದ ಸಂಬಂಧ ಉಳಿದಿರಲಿಲ್ಲ ಅಂದರೆ ಸರಿ.

9. ಚಾಸಾ-9 ಈತನು ನನ್ನ ತಂದೆಯ ಅಕ್ಕನ ಗಂಡ ಅಂದರೆ ಸರಿ. ಚಾಸಾ-10 ಈತನು ಚಾಸಾ-9 ಈತನ ಸಹೋದರ ಅಂದರೆ ಸರಿ. ಚಾಸಾ-9 ಈತನು ನಮ್ಮ ಊರಿನ ಪಂಚಾಯಿತಿಗೆ ಅಧ್ಯಕ್ಷನಾಗಿದ್ದನು ಅಂದರೆ ಸರಿ. ಇವರೆಲ್ಲರ ಮನೆಗಳು ಹರಿಜನರ ಓಣಿಗಳಲ್ಲಿ ಬರುತ್ತವೆ ಅಂದರೆ ಸರಿ. ಚಾಸಾ-3 ಈತನು ಚಾಸಾ-9 ಈತನ ಮನೆಯಲ್ಲಿ ಚಾಲಕನಾಗಿದ್ದನು ಅಂದರೆ ಸರಿ.

10. ಚಾಸಾ-4 ಈತನ ಮುತ್ತಾತ ಮತ್ತು ನನ್ನ ಮುತ್ತಾತ ಎರಡನೇ ಅಣ್ಣ ತಮ್ಮಂದಿರು ಅಂದರೆ ಸರಿ. ಚಾಸಾ-5 ಈತನು ಶಿವಮ್ಮ ಈತನ ಮಗ ಅಂದರೆ ಸರಿ. ಚಾಸಾ-11 ಈತನು ಟ್ರ್ಯಾಕ್ಟರ್ ಚಾಲಕನಿದ್ದಾನೆ ಮತ್ತು ಆತ ಚಾಸಾ-9 ಈತನ ಮನೆಯಲ್ಲಿ ಕೆಲಸ ಮಾಡಿದ್ದಾನೆ ಅಂದರೆ ಸರಿ. ಚಾಸಾ-12 ಈತನು ಚಾಸಾ-9 ಈತನ ಅಣ್ಣನ ಮಗಳ ಗಂಡ ಅಂದರೆ ಸರಿ. ಚಾಸಾ-11 ಮತ್ತು 12 ಇವರು ವಾಸವಿರುವ ಗ್ರಾಮ ನಮ್ಮ ಊರಿನಿಂದ 5 ಕಿ.ಮಿ ಅಂತರದಲ್ಲಿದೆ ಅಂದರೆ ಸರಿ.

11. ನನ್ನ ತಂದೆಗೆ ಕುಡಿಯುವ ಚಟ ಇದೆ ಮತ್ತು ಜಗ್ಗಿ ಕುಡಿಯುತ್ತಾನೆ ಅಂದರೆ ಸರಿ. ನನ್ನ ತಂದೆ ಕುಡಿದ ಅವಲಿನಲ್ಲಿ ಆರೋಪಿಯ ಹೆಂಡತಿಯೊಂದಿಗೆ ಅನೇಕ ಬಾರಿ

ಜಗಳ ಮಾಡಿದ್ದಾನೆ ಅಂದರೆ ನನಗೆ ಗೊತ್ತಿರುವುದಿಲ್ಲ. ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

12. ನಾನು ಈ ಮೊದಲು ನ್ಯಾಯಾಲಯಕ್ಕೆ ಬಂದಾಗ ನನ್ನ ತಂದೆ, ಚಾಸಾ-6 ಮತ್ತು ಚಾಸಾ-9 ಇವರು ಹೇಳಿಕೊಟ್ಟಂತೆ ನಾನು ಸಾಕ್ಷಿ ಹೇಳಿದ್ದೇನೆ ಅಂದರೆ ಸರಿ. ನಾನು ಈ ಕೇಸಿನಲ್ಲಿಯ ಘಟನೆಯನ್ನು ನೊಡಿಲ್ಲ ಅಂದರೆ ಸರಿ. ನಮ್ಮದು ಜಮೀನುದಲ್ಲಿ ಮನೆ ಇಲ್ಲ ಅಂದರೆ ಸರಿ.

13. ನಾನು ಮತ್ತು ನನ್ನ ತಂದೆ ಬೇರೆ ಊರಿಗೆ ಉಪಜೀವನಕ್ಕಾಗಿ ಹೋಗಿಲ್ಲ ಅಂದರೆ ಸರಿ. ನನ್ನ ತಂದೆ ಮತ್ತು ತಾತ ಆರೋಪಿತನ ಜಮೀನನ್ನು ಒತ್ತುವರಿ ಮಾಡಿ ಸಾಗುವಳಿ ಮಾಡುತ್ತಿದ್ದರು ಅಂದರೆ ಸರಿ. ಆರೋಪಿ ತನ್ನ ಊರಿಗೆ ಬಂದಾಗಿನಿಂದ ಆತನ ಜಮೀನು ಬೀಳು ಬಿದ್ದಿದೆ ಅಂದರೆ ಸರಿ. ಆ ಜಮೀನನ್ನು ಆರೋಪಿ ಮತ್ತು ಆತನ ತಂದೆಗೆ ಸಾಗುವಳಿ ಮಾಡಲು ನನ್ನ ತಂದೆ, ತಾತ ಮತ್ತು ನನ್ನ ತಂದೆಯ ಸಹೋದರರು ಬಿಡುತ್ತಿಲ್ಲ ಅಂದರೆ ಸರಿ.

(ಸರ್ಕಾರಿ ಅಭಿಯೋಜಕರು ಸಾಕ್ಷಿ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲಿನಲ್ಲಿ ತದ್ವಿರುದ್ಧ ಹೇಳಿಕೆಗಳನ್ನು ನೀಡಿದ್ದರಿಂದ ಪಾಟೀ ಸವಾಲಿಗೆ ಅವಕಾಶ ಕೋರಿದ್ದಾರೆ. ಸಾಕ್ಷಿಯ ಎರಡು ಹೇಳಿಕೆಗಳನ್ನು ನ್ಯಾಯಾಲಯ ನೋಡಿದೆ. ಆ ಹೇಳಿಕೆಗಳನ್ನು ಗಮನಿಸಿದಾಗ ಪಾಟೀ ಸವಾಲಿಗೆ ಅವಕಾಶ ನೀಡುವುದು ಸೂಕ್ತ ಎಂದು ಕಂಡು ಬಂದಿದ್ದರಿಂದ ಪಾಟೀ ಸವಾಲಿಗೆ ಅವಕಾಶ ನೀಡಲಾಗಿದೆ.)

**ಪಾಟೀ ಸವಾಲು ಸರ್ಕಾರಿ ಅಭೀಯೋಜಕರಿಂದಃ**

14. ಆರೋಪಿ ನಮ್ಮ ಮನೆಯ ಒಳಗೆ ಅತೀಕ್ರಮಣ ಮಾಡಿ ನನ್ನ ತಂದೆಯನ್ನು ಚಾಕುವಿನಿಂದ ಚುಚ್ಚುವುದನ್ನು ನಾನು ನೋಡಿದ್ದೇನೆ ಅಂದರೆ ಸರಿ. ಆರೋಪಿ ನನ್ನ ತಂದೆಯನ್ನು ಬೈಯುವುದನ್ನು ಮತ್ತು ನನ್ನ ತಂದೆಗೆ ಬೆದರಿಕೆ ಹಾಕಿದ್ದನ್ನು ನಾನು ನೋಡಿದ್ದೇನೆ ಅಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>**

15. ಆರೋಪಿ ನಮ್ಮ ಮನೆಯ ಒಳಗೆ ಅತೀಕ್ರಮಣ ಮಾಡಿ ನನ್ನ ತಂದೆಗೆ ಚಾಕುವಿನಿಂದ ಚುಚ್ಚಿದ್ದಾನೆಂದು; ನನ್ನ ತಂದೆಯನ್ನು ಬೈದಿದ್ದಾನೆಂದು ಮತ್ತು ನನ್ನ ತಂದೆಗೆ ಬೆದರಿಕೆ ಹಾಕಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಬಿ.ಬಿ.ಜಕಾತಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು
C/c ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.